# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ದೂರವಾಣಿ ಸಂಖ್ಯೆ :(08472) 256782
ಫ್ಯಾಕ್ಸ್ ಸಂಖ್ಯೆ: (08472) 256647

ನಿಗಮ ಕಾರ್ಯಾಲಯ
ಗು.ವಿ.ಸ.ಕಂ.ನಿ., ಕಲಬುರಗಿ

**ಪತ್ರ ಸಂಖ್ಯೆ: ಗು.ವಿ.ಸ.ಕಂ.ನಿ/ಪ್ರ.ವ್ಯ/ಲೆ(ಸಿ)/2018-19/ 68138** **ದಿನಾಂಕ:27.02.2019**

## ಕಂಪನಿ ಕಾರ್ಯದರ್ಶಿ ನೇಮಕಾತಿ ಅಧಿಸೂಚನೆ

*****

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತವು ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದ್ದು, 2002 ರ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ಗುವಿಸಕಂಪನಿಯು ಹೈದರಾಬಾದ-ಕರ್ನಾಟಕ ಪ್ರದೇಶದ ವ್ಯಾಪ್ತಿಯ ವಿದ್ಯತ್ ಗ್ರಾಹಕರಿಗೆ ಗುಣ ಮಟ್ಟದ ವಿದ್ಯುತ್ ಸರಬರಾಜು ಮಾಡಲು ತೊಡಗಿರುತ್ತದೆ. ಕಂಪನಿಯು ತನ್ನ ಕಲಬುರಗಿಯಲ್ಲಿರುವ ನಿಗಮ ಕಛೇರಿಯಲ್ಲಿನ ಕಂಪನಿ ಕಾರ್ಯದರ್ಶಿ ಹುದ್ದೆಗೆ ಸೂಕ್ತ ಅಭ್ಯರ್ಥಿಯ ಆಯ್ಕೆಗಾಗಿ ಈ ಅಧಿಸೂಚನೆಯನ್ನು ಹೊರಡಿಸಿದೆ.

**ಅಭ್ಯರ್ಥಿಯು;**

1. ಇನ್ಸ್‌ಟಿಟ್ಯೂಟ್ ಆಪ್ ಕಂಪನಿ ಸೆಕ್ರೆಟರೀಸ್‌ಆಫ್ ಇಂಡಿಯಾ (ICSI) ದ ಸದಸ್ಯರಾಗಿರಬೇಕು ಮತ್ತು ಕನಿಷ್ಟ ಐದು ವರ್ಷಗಳ ಅನುಭವ ಹೊಂದಿರಬೇಕು.
2. ಕಂಪನಿಗಳ ಕಾಯ್ದೆ, 2013 ರ ಅಡಿಯಲ್ಲಿ ದಾಖಲಾದ ಎಲ್ಲಾ ಶಾಸನಬದ್ಧ ಕಾರ್ಯಗಳನ್ನು ಸಮಯೋಚಿತ ಅನುಸರಣೆ ಮತ್ತು ಇನ್ನಿತರ ಸಂಬಂಧಿಸಿದ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವವರಾಗಿರಬೇಕು.
3. ಸರ್ಕಾರದ ಪ್ರಾಧಿಕಾರಗಳ ಜೊತೆ ನಿಯತಕಾಲಿಕವಾಗಿ ಆಂಗ್ಲಭಾಷೆ ಮತ್ತು ಕನ್ನಡ ಭಾಷೆಯಲ್ಲಿ ಪರಿಣಾಮಕಾರಿಯಾಗಿ ವ್ಯವಹರಿಸುವ ಸಾಮರ್ಥ್ಯ ಹೊಂದಿರಬೇಕು.
4. ಹೈದ್ರಾಬಾದ-ಕರ್ನಾಟಕದ ವ್ಯಾಪ್ತಿಗೆ ಬರುವ ಅಭ್ಯರ್ಥಿಗಳಿಗೆ ಪ್ರಥಮ ಅಧ್ಯತೆ ನೀಡಲಾಗುವುದು.

ಆಸಕ್ತಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ದಿನಾಂಕ:01.03.2019 ರ ನಂತರ ಗುವಿಸಕಂನಿ ವೆಬ್‌ಸೈಟ್:WWW.GESCOM.IN ನಲ್ಲಿ ವೀಕ್ಷಿಸಬಹುದು.

**ಸಹಿ/-**
**ಪ್ರಧಾನ ವ್ಯವಸ್ಥಾಪಕರು**
**(ಆ ಮತ್ತು ಮಾ.ಸಂ.ಅ),**
**ನಿಗಮ ಕಾರ್ಯಾಲಯ**
**ಗು.ವಿ.ಸ.ಕಂ.ನಿ., ಕಲಬುರಗಿ**